ಮೈಸೂರ ಗೆಜಿಟ.

ನಂ. 12 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1884.

ಬೆಂಗಳೂರು, ಶನಿವಾರ, ಮಾರ್ಚಿ ತಾ॥ 22, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀರ್ವಾರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಿಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್‌ಟೆಂಡೆಂಟರು, ಕಾಂ ಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರಿಟೆರಿಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೆ ಬಕಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟುವ ಸೆಷನ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್‌ಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲಾ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 12ನೇ ಮಾರ್ಚಿ 1884.

ನಂ. 334.—ಕಡೂರು ಡೆಪ್ಯುಟಿ ಕಮ್ಮಿಷನರ ಆಫೀಸ್ ಹೆಡ್ ಅಕ್ಕೌಂಟೆಂಟ್ ವೆಂಕಟವರದಯ್ಯಂಗಾರ್ರು, ಮಹಮ್ಮದಲ್ಲೀಖಾರ್ರು ರಜಾದ ಮೇಲಿರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ, ಯಡೇಹಳ್ಳಿ ಡೆಪ್ಯುಟಿ ಅಮಲ್‌ದಾರ್‌ರಾಗಿ ಆಕ್ಟಿಂಗ್ ತರೀಕೆ ಕೆಲಸ ನೋಡುವಂತೆ 1884ನೇ ಇಸವಿ ಫಿಬ್ರವರೀ 22ನೇ ಮತ್ತು ಂ 323ನೇ ನಂಬರ್ ಇಸ್ತಿಹಾರಿನಿಂದ ಮಾಡಲ್ಪಟ್ಟಿದ್ದ ನೊಕರರಾತಿಯು ರದ್ದು ಮಾಡಲ್ಪಟ್ಟಿರುತ್ತೆ.

ಚಿಕ್ಕಮಗಳೂರು ಸಬ ಜಡ್ಜೀಯವರ ಕೋರ್ಟು ಶಿರಸ್ತೇದಾರ್ ಜೆ. ಯಂ. ಡಿಸೋಜಾಯವರು, ಮಹಮ್ಮದಲ್ಲೀಖಾರ್ರು ರಜಾದ ಮೇಲಿರುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಯಡೇಹಳ್ಳಿ ಡೆಪ್ಯುಟಿ ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ನೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 335.—ಕಡೂರು ಡಿಪ್ಯುಟಿಕ್ಟು ಮೂಡಿಗೆರೆ ತಾಲ್ಲೂಕು ಅಮಲ್ದಾರ್ ಕುಪ್ಪುಸಾಮಿ ನಾಯಿಡರವರಿಗೆ, ಡೆಪ್ಯುಟಿ ಕಮ್ಮಿಷನರ್ ಯವರ ಆರ್ಡರ್ ಅನುಸರಿಸಿ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಾಗಾಯತು, ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕಡೂರು ಡೆಪ್ಯುಟಿ ಕಮ್ಮಿಷನರ ಆಫೀಸ್ ಹೆಡ್ ಅಕ್ಕೌಂಟೆಂಟ್ ವೆಂಕಟವರದಯ್ಯಂಗಾರ್ರು, ಅಮಲ್ದಾರ್ ಕುಪ್ಪುಸಾಮಿ ನಾಯಿಡು ಯವರು ರಜಾದ ಮೇರಿಗುವಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ, ಮೂಡಿಗೆರೆ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಅಪ್ಪಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 13ನೇ ಮಾರ್ಚೀ 1884.

ನಂ. 336.—ಅಮೃತಮಹಲ್ ಇಲಾಖೆಗೆ ಕೇರಿದ ಅಮಲ್ದಾರ್ ಬಿ. ಗೋಪಾಲಯ್ಯಂಗಾರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಸ್ವಂತ ಕೆಲಸದಮೇಲೆ ಮೂರು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 337.—ಗೋವಿಂದಪ್ಪನವರಿಗೆ ಅವರು ಯಳಂದೂರು ತಾಲ್ಲೂಕು ಅಮಲ್ದಾರೀ ಕೆಲಸ ಚಲಾಯಿಸುವ ಕಾಲದಲ್ಲಿ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ 22ನೇ ಸೆಕ್ಷನ್ ಅನುಸರಿಸಿ ಮೂರನ್ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

ತಾರೀಖು 14ನೇ ಮಾರ್ಚೀ 1884.

ನಂ. 338.—ಕೋಲಾರ ಮ್ಯುನಿಸಿಪಲ್ ಇ. ತಿ. ವೆಂಕಟ್ಟಾನಂ ಪಿಳ್ಳೆಯವರಿಗೆ, 1884ನೇ ಜನವರೀ 18ನೇ ನುಕ್ಕುಂ 300ನೇ ನಂಬರ್ ಈ ಆಫೀಸ್ ಇನ್ಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ರಜಾಕ್ಕೆ ಡಾಸ್ತೀಯಾಗಿ ಮೆಡಿಕೆಲ್ ಸರಟಿಫಿಕೇಟ್ ಮೇಲೆ ಹದಿನಾರು ದಿನಗಳ ಕಾಹಿಲೆ ರಜಾ ಕೊಡಲ್ಪಟ್ಟಿರುತ್ತೆ.

ನಂ. 339.—ಮೈಸೂರು ಡಿಪ್ಯುಟಿಕ್ಟು ಹೆಗ್ಗಡದೇವನಕೋಟೆ ತಾಲ್ಲೂಕು ಅಮಲ್ದಾರ್ ರಘುನಾಥರಾಯರು, ತಮ್ಮ ಕೆಲಸದ ಮೇಲೆ ವಾಪಸ್ ಬಂದ ಸಬಬ್ 1884ನೇ ಇಸವಿ ಮಾರ್ಚೀ 7ನೇ ಮುಕ್ಕುಂ 333ನೇ ನಂಬರ್ ಈ ಆಫೀಸ್ ಇನ್ಸ್ತಿಹಾರ್‌ನಾಮೆಯಲ್ಲಿ ಅವರಿಗೆ ಕೊಡಲ್ಪಟ್ಟಿದ್ದ ರಜಾ ಪೈಕಿ ಉಪಯೋಗಿಸಿಕೊಳ್ಳಲ್ಪಡದ ಭಾಗವು ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 21ನೇ ಮಾರ್ಚೀ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಮೋಜೀಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರಟೇರಿ.

ತಾರೀಖು 22ನೇ ಮಾರ್ಚೀ 1883.

ನಂ. 85.—ದೀವಾನರವರು ತಮ್ಮ ವಾಸಸ್ಥಾನದಲ್ಲಿ ಪ್ರತಿ ಬುಧವಾರ ಮಧ್ಯಾನ್ಹ 12 ಘಂಟೆಯಲ್ಲೂ, ಗುರುವಾರಗಳಲ್ಲಿ ಬೆಳಗ್ಗೆ 8 ಘಂಟೆಯಲ್ಲೂ, ತಮ್ಮ ಭೇಟೀ ತೆಗದುಕೊಳ್ಳಲಪೇಕ್ಷಿಸತಕ್ಕವರಿಗೆ ಭೇಟೀ ಕೊಡುವರು. ಅವರು ತಮ್ಮ ಕಾರ್ಡ್ ಚೀಟಿಗಳನ್ನು ದೀವಾನರವರ ಪ್ರೈವೇಟ್ ಸೆಕ್ರಟೇರಿಯವರಿಗೆ ಹಿಂದಿನ ದಿನದಲ್ಲಿ ಕಳುಹಿಸತಕ್ಕದ್ದು.

ಬಮೋಜೀಬ್ ಹುಕ್ಕುಂ,

ಸಿ. ರಾಘವಾಚಾರ್ಲು,

ಪ್ರೈವೇಟ್ ಸೆಕ್ರಟೇರಿ.